ಡಾ. ಲಕ್ಷ್ಮಣ ವಿ.ಎ. ಬೆಳಗಾವಿ ಜಿಲ್ಲೆಯ ಅಥಣಿಯವರು. ಸದ್ಯಕ್ಕೆ ಬೆಂಗಳೂರಿನಲ್ಲಿ ಆಯುರ್ವೇದ ವೈದ್ಯರು. ಕವಿಯಾಗಿ ಓದುಗರಿಗೆ ಪರಿಚಿತರಾದರೂ, ಸೊಗಸಾದ ಕಥೆ ಪ್ರಬಂಧಗಳನ್ನೂ ಬರೆಯಬಲ್ಲರು. 'ಎಲೆಕ್ಟ್ರಿಕ್ ಬೇಲಿ ಮತ್ತು ಪಾರಿವಾಳ', 'ಅಪ್ಪನ ಅಂಗಿ' ಪ್ರಕಟಿತ ಕವನಸಂಕಲನಗಳು. 'ಮಿಲ್ಟ್ರಿ ಟ್ರಂಕು' ಪ್ರಬಂಧಗಳ ಗುಚ್ಛ.

ಇತ್ತ ಬಸಣ್ಣ ಸಾವುಕಾರಿಗೂ ಒಂದ್ ಮಾತನೂ ಹೇಳದೆ ಸಣ್ಣ ಮಾರಿ ಮಾಡಿಕೊಂಡು ಅಲ್ಲಿಂದ ಕಾಲು ಕಿತ್ತು ವಾಪಸು ಮನಗೆ ಬಂದು ಲಗಮಣ್ಣನ ಕರೆದು ಸಾವುಕಾರ ಹೇಳಿದ ಮಾತು ಹೇಳಿದ-

'ಅಪ್ಪಾ ನೀ ಅಂಜಬ್ಯಾಡ, ಫೈನಲ್ ಈಯರ್ ತಂಕಾ ತ್ರಾಸ್ ಆಕ್ಕೈತಿ. ಆಮ್ಯಾಲ ಸ್ಕಾಲರ್‌ಶಿಪ್ ಬರ್ತೈತಿ. ಮಾಡಿದ ಸಾಲ ಎಲ್ಲಾ ಒಂದ್ ವರ್ಸದಾಗ ಚುಕ್ತ ಮಾಡಬಹುದ' ಅಂತ ಲಗಮಣ್ಣ ಅಪ್ಪಗ ಧೈರ್ಯ ತುಂಬಿದ್ರೂ, ಬಸಣ್ಣನಿಗೆ ಭಲೇ ಬೇಸರ ಆಗಿದ್ದು ಸಾವುಕಾರು ಆಡಿದ ಕೊಂಕ ನುಡಿಗಳು. 'ಖುಷೀ ಆತೋ ಬಸಣ್ಣ, ನಿನ್ನ ಮಗಾನೂ ನನ್ನ ಮಗಾ ಇದ್ದಂಗ ಬಂದ ಸಾಲಿ ಖರ್ಚು ನೋಡ್ಕೋತಿನಿ, ನೀ ತಲಿ ಕೆಡಿಸ್ಕೊಬ್ಯಾಡ ಸುಮ್ಮನಿರು' ಅಂತ ಒಂದು ಧೈರ್ಯದ ಮಾತು ಹೇಳಿದ್ರ ಬಸಣ್ಣ ಎಂತ ದೊಡ್ಡ ಬೆಟ್ಟ ಬೇಕಿದ್ರೂ ಕಿತ್ತು ಇಡ್ತಿದ್ದ. ಅದರ ಬದಲಾಗಿ ಅವರು ಹೆದರಿದವರ ಕಾಲಿನ ಬುಡಕ್ಕೆ ಹಾವು ಬಿಟ್ಟದ್ದು ಬಸಣ್ಣನಿಗೆ ಬಲು ಬೇಸರ ತರಿಸಿತ್ತು.

ಬಸಣ್ಣನಿಗೆ ಜೀವನದಲ್ಲಿ ತಾನು ದುಡಿದು ಕೂಡಿಡಲಾರದೇ ಸುಮ್ಮನೆ ಊರು ಉಸಾಬರಿ ಮಾಡಿ ಮುಲ್ಲಾ ಸೊರಗಿದ ಅನ್ನೋ ಹಾಗೆ ಪರೋಪಕಾರದಲ್ಲೇ ಪರಮಾತ್ಮನ ಕಂಡಿದ್ದಕ್ಕೆ ಪ್ರಾಯಶ್ಚಿತ್ತ ಪಡುತ್ತಿದ್ದ. ಅನ್ಯಾಯವಾಗಿ ತನ್ನ ಯೌವನದ ದಿನಗಳನ್ನು ಹಾಳು ಮಾಡಿಕೊಂಡು ಮಗನ ಭವಿಷ್ಯದ ಬಗ್ಗೆ ಯೋಚನೆ ಮಾಡದ ಪಾಪ ಪ್ರಜ್ಞೆಯಲ್ಲಿ ನೊಂದುಕೊಂಡ.

ಪೇರೂ ಹಣ್ಣು ಮಾರೋ ಬದಲು ಕಬ್ಬು ಕಡಿದೋ, ಬಾವಿ ಹೊತ್ತೋ, ಮೈ ಬಗ್ಗಿಸಿ ದುಡಿದು ಕಾಸು ಇಟ್ಟದ್ದರೆ ಇಂದು ಅ ಸಾವುಕಾರರ ಮನೆ ಹತ್ತಿರ ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ ಎಂದು ನಿಟ್ಟುಸಿರು ಬಿಟ್ಟ. ಏನ್ ಮಾಡೋದು ತಿಳೀದೆ ಮನೆ ಮುಂದಿನ ನುಗ್ಗೆಕಾಯಿ ಮರದ ಕೆಳಗೆ ತುದಿಗುಂಡಿ ಊರಿ ಬೀಡಿ ಅಂಟಿಸಿದ.

ಜೀವನದಲ್ಲಿ ಮೊಟ್ಟ ಮೊದಲಬಾರಿಗೆ ಬದುಕಿನ ಅರ್ಥ ಹುಡುಕುವಂತಹ ಲೌಕಿಕ ಮನುಷ್ಯನಾದ. ಇದಕ್ಕಿಂತ ಮೊದಲು ಈ ಬಸಣ್ಣ ಬಲು ಜಾಲೀ ಮನುಷ್ಯ. ಪೇರೂ ಬುಟ್ಟಿ ಮಾರಾಟವಾಗಿ ಖಾಲಿಯಾದರೆ ಮಾಡಲು ಕೆಲಸವೇನೂ ಇರುತ್ತಿರಲಿಲ್ಲವೆಂದರೆ ಸೀದಾ ಸಣ್ಣಪ್ಪ ಸಾವುಕಾರ ಮನೇತಾವು ಹೋಗಿ ಸೌದೆ ಒಡೆಯುವುದು, ಹುಳ ಹತ್ತಿದ ಮೆಕ್ಕೆ ಜೋಳ ಬಿಸಿಲಿಗೆ ಒಣ ಹಾಕುವುದು ಇಂತಹವೆ ಹತ್ತು ಹಲವೆಂಟು ಕೆಲಸ ಮಾಡಿ ಸಣ್ಣಪ್ಪ ಸಾವುಕಾರರಿಗೂ, ಅಕ್ಕೋರಿಗೂ ಬಲು ಆಪ್ತನಾಗಿದ್ದ. ಸಣ್ಣಪ್ಪ ಸಾವುಕಾರರು ಮನೆಯಲ್ಲಿರುವುದೇ ಅಪರೂಪ. ಎಲೆಕ್ಷನ್ನು ಮೀಟಿಂಗು, ಎಮ್ಮೆಲ್ಲೆ ಸಾಹೇಬರ ಫಂಕ್ಷನ್ನು ಅಂತ ಬೆಳಗಾವಿ, ಧಾರವಾಡ, ಬೆಂಗಳೂರು ಅಂತ ತುಂಬ ಬಿಜಿಯಾಗಿರುತ್ತಿದ್ದರು. ಈ ಸಣ್ಣಪ್ಪ ಸಾವುಕಾರರ ದೆಸೆಯಿಂದ ಕಾಲ ಕಾಲಕ್ಕೆ ಊರಿಗೆ ರೇಷನ್ನು, ಜನತಾ ಕಾಲೋನಿಯ ಮನೆ, ಟಾರು ರೋಡು, ಗಟಾರು ಎಲ್ಲ ಬಂದಿದ್ದು ತನ್ನೂರಿಗೆ ಬಂಡೆ ಬಸಪ್ಪನ ದೊಡ್ಡಿ ಎಂಬ ಹಳೆಯ ಊರಿನ ಹೆಸರನ್ನು ತುಂಡಾಗಿಸಿ ಬಿ.ಬಿ.ದೊಡ್ಡಿ ಅಂತ ಹೊಸ ಬಸ್ಸಿನ ನೇಮ್ ಪ್ಲೇಟ್ ಬರೆಸಿ ಮಿನಿಷ್ಟ್ರು ಕಡೆಯಿನಿಂದ ಉದ್ಘಾಟನೆ ಮಾಡಿಸಿದ. ಸ್ವಾತಂತ್ರ್ಯ, ದೇಶ ಸೇವೆ, ದೀನ, ಗಾಂಧಿ ರೈತರ ಆತ್ಮಹತ್ಯೆ ಅಂತ ಆ ದಿನ ಭಾಷಣ ಮಾಡಿ ಭರಪೂರ ಚಪ್ಪಾಳೆ ಗಿಟ್ಟಿಸಿದ್ದ. ತಿಂಗಳ ಹಿಂದಷ್ಟೇ ಊರೊಳಗಿನ ಎರಡು ಸಹಜ ಸಾವುಗಳನ್ನೇ ರೈತರ ಆತ್ಮಹತ್ಯೆ ಎಂದು ಬಿಂಬಿಸಿ ಮೂರು ಲಕ್ಷ ರೂಪಾಯಿ ಪರಿಹಾರ ಕೊಡಿಸಿ ಊರವರ ಹುಬ್ಬೇರಿಸಿದ್ದ. ಅಸಲು ಅವರಿಬ್ಬರೂ ಸೆರೆ ಕುಡಿದೂ ಕುಡಿದೂ ಲಿವರ್ ಫೇಲಾಗಿ ಹೊಟ್ಟೆ ನೋವೆಂದು ನರಳಿ ನರಳಿ ದೊಡ್ಡಾಸ್ಪತ್ರೆಗೆ ಹೋಗಲು ಕಾಸಿಲ್ಲದೆ ಮನೆಯಲ್ಲೇ ತೀರಿ ಹೋಗಿದ್ದರು. ಅವರಿಬ್ಬರೂ ಸಣ್ಣಪ್ಪ ಸಾವುಕಾರರ ಎಡಗೈ, ಬಲಗೈ ತರಹ ಇದ್ದವರು. ಬಸಣ್ಣನಿಗೆ ಜನತಾ ಕಾಲನಿಯ ಮನೆ ಕೂಡ ಕೊಡಿಸಿದ್ದು ಸಣ್ಣಪ್ಪ ಸಾವುಕಾರೇ ಎಂದು ಇವರ ದೊಡ್ಡತನವನ್ನು